(ಈ) ಕೆರೆಗಳ ಗುತ್ತಿಗೆ ಮತ್ಸ್ಯಾಶ್ರಯ ಯೋಜನೆಯಡಿ ಮನೆ, ಮಿನುಗಾರಿಕೆ ಸಲಕರಣೆ ಕಿಟ್, ಕೊಳಗಳ ನಿರ್ಮಾಣಕ್ಕಾಗಿ ಎನ್.ಎಂ.ಪಿ.ಎಸ್. ಯೋಜನೆಯಡಿ ಸಹಾಯಧನ, ಉಚಿತವಾಗಿ ಶಾಖಿನಿರೋಧಕ ಪೆಟ್ಟಿಗೆ, ಸೈಕಲ್ ಮತ್ತು ಐಸ್‌ಬಾಕ್ಸ್, ಬಾವಿಗಳಿಗೆ ಉಚಿತ ಮೀನುಮತಿ ವಿತರಣೆ, ಉಚಿತವಾಗಿ ಫೈಬರ್‌ಗ್ಲಾಸ್ ಹರಿಗೋಲು ವಿತರಣೆ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

(ಉ) ಮೀನುಗಾರಿಕೆ ಇಲಾಖೆಯ ಮತ್ಸ್ಯಾಶ್ರಯ ಯೋಜನೆಯಲ್ಲಿ ಗಂಗಾಮತಸ್ಥ ಜನಾಂಗದವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೌಲಭ್ಯ ಕಲ್ಪಿಸಲು ಅನುವಾಗುವಂತೆ ಆಯ್ಕೆ ಪ್ರಕ್ರಿಯೆಯಲ್ಲಿ ಹುಟ್ಟಿನಿಂದ/ವೃತ್ತಿಯಲ್ಲಿ ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರಬೇಕು ಎಂಬ ಷರತ್ತನ್ನು ವಿಧಿಸಲಾಗಿದೆ. ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಮೀನುಗಾರರಿಗೆ ಮೀನುಗಾರಿಕೆ ಇಲಾಖೆಯಿಂದ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಿಂದ ಇದುವರೆವಿಗೂ ಒಟ್ಟು 32 ಮನೆಗಳನ್ನು ಮಂಜೂರು ಮಾಡಲಾಗಿದೆ.

ಕ್ರೀಡಾಂಗಣ ನಿರ್ಮಿಸುವುದು

3 (68) **ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)**:– ಮಾನ್ಯ ಯುವ ಸಬಲೀಕರಣ ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚನ್ನರಾಯಪಟ್ಟಣಕ್ಕೆ ಕ್ರೀಡಾಂಗಣ ಮಂಜೂರು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕ್ರೀಡಾಂಗಣದ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆಯೇ ;

(ಇ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ;

(ಈ) ಕ್ರೀಡಾಂಗಣದ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದರೂ ಸಹ ಅನುದಾನವನ್ನು ಬಿಡುಗಡೆ ಮಾಡದೇ ಇರಲು ಕಾರಣಗಳೇನು ;

(ಉ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಕೆ. ಅಭಯ ಚಂದ್ರ (ಮಾನ್ಯ ಯುವ ಸಬಲೀಕರಣ ಕ್ರೀಡಾ ಹಾಗೂ ಮೀನುಗಾರಿಕೆ ರಾಜ್ಯ ಸಚಿವರು):–

(ಅ) ಬಂದಿದೆ.

(ಆ) ಸರ್ಕಾರಿ ಆದೇಶ ಸಂ: ವಾಪ್ರಯು/120/98 ದಿ: 15–06–1998 ರಲ್ಲಿ ರೂ. 36.50 ಲಕ್ಷಗಳ ಅನುದಾನದಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣ ಕಾಮಗಾರಿಯನ್ನು ಮಾಡಲು ಆಡಳಿತಾತ್ಮಕ

ಅನುಮೋದನೆ ನೀಡಲಾಗಿತ್ತು. ಸದರಿ ಅನುದಾನದಲ್ಲಿ ನೆಲ ಸಮತಟ್ಟು, ಪೆವಲಿಯನ್ ಕಟ್ಟಡ ನಿರ್ಮಾಣ, ಕ್ರೀಡಾಂಗಣ ಸುತ್ತ ಬಂಡ್ ನಿರ್ಮಾಣ, ಡ್ರೈನೇಜ್ ಅಪ್ರೋಚ್ ರಸ್ತೆ ಬೋರ್‌ವೆಲ್ ನಿರ್ಮಾಣ, ತಡೆಗೋಡೆ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲಾಗಿದೆ.

(ಇ) ಪೂರ್ಣ ಅನುದಾನ ರೂ. 36.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

(ಈ) 2012–13ನೇ ಸಾಲಿನಲ್ಲಿ ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು ಕ್ರೀಡಾಂಗಣದ ಈ ಕೆಳಗಿನಂತೆ ಹೆಚ್ಚುವರಿ ಕಾಮಗಾರಿಗಳಿಗೆ ಪ್ರಸ್ತಾವನೆ ಬಂದಿರುತ್ತದೆ.

1	ತಾಲ್ಲೂಕು ಕ್ರೀಡಾಂಗಣದಲ್ಲಿ ಮಲ್ಟಿಜಿಮ್ ಕಟ್ಟಡ ನಿರ್ಮಾಣ	ರೂ. 15.00 ಲಕ್ಷ
2	ತಾಲ್ಲೂಕು ಕ್ರೀಡಾಂಗಣದ ಪೆವಲಿಯನ್ ಛಾವಣಿ ನಿರ್ಮಾಣ	ರೂ. 23.60 ಲಕ್ಷ
3	ತಾಲ್ಲೂಕು ಕ್ರೀಡಾಂಗಣದ ಆವರಣದಲ್ಲಿ ಚರಂಡಿ ನಿರ್ಮಾಣ ಮತ್ತು ನೀರು ಹರಿದುಹೋಗಲು ಮೋರಿ ವ್ಯವಸ್ಥೆ	ರೂ. 10.50 ಲಕ್ಷ
4	ತಾಲ್ಲೂಕು ಕ್ರೀಡಾಂಗಣದ ಮುಖ್ಯದ್ವಾರದ ಆರ್‌ಸಿಸಿ (ಪೆವಲಿಯನ್ ಒಳಭಾಗ) ಛಾವಣಿ ನಿರ್ಮಾಣ ಹಾಗೂ ಮುಖ್ಯದ್ವಾರದ ಪಕ್ಕದ ದ್ವಾರಗಳಲ್ಲಿ ಗೋಡೆ ಅಳವಡಿಸುವುದು	ರೂ. 8.25 ಲಕ್ಷ
5	ತಾಲ್ಲೂಕು ಕ್ರೀಡಾಂಗಣದ ವಾಲಿಬಾಲ್ ಅಂಕಣ ನಿರ್ಮಾಣ ಮತ್ತು ಲಾಂಗ್ ಜಂಪ್ ಆವರಣ ಅಭಿವೃದ್ಧಿ	ರೂ. 3.70 ಲಕ್ಷ
6	ತಾಲ್ಲೂಕು ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿ (ಉಳಿಕೆ ಕಾಮಗಾರಿ)	ರೂ. 10.00 ಲಕ್ಷ
7	ತಾಲ್ಲೂಕು ಕ್ರೀಡಾಂಗಣದ ಚೈನ್ ಲಿಂಕ್ ಫಿನ್ಸಿಂಗ್ ಅಳವಡಿಸುವುದು	ರೂ. 14.25 ಲಕ್ಷ
	ಒಟ್ಟು	ರೂ. **85.30** ಲಕ್ಷ

ಮೇಲ್ಕಂಡ ಕಾಮಗಾರಿಗಳಿಗೆ ಒಟ್ಟಾರೆ ರೂ. 85.30 ಲಕ್ಷಗಳಿಗೆ ಈ ಇಲಾಖಾ ಆಜ್ಞಾ ಪತ್ರ ಸಂ: ಡಿವೈಎಸ್ಎಸ್/ಯೋ–2/29/2011–12, ದಿನಾಂಕ: 29–01–2013 ರಂದು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2012–13ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಈ ಸಾಲಿನಲ್ಲಿ ರೂ. 3751.21 ಲಕ್ಷಗಳನ್ನು ಒದಗಿಸಿದ್ದು ಇದರಲ್ಲಿ 500.00 ಲಕ್ಷಗಳನ್ನು ಕಡಿತಗೊಳಿಸಿದ್ದರಿಂದ 2012–13ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲು ಸಾಧ್ಯವಾಗಿರುವುದಿಲ್ಲ.

2013–14ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಮುಖ ಆದ್ಯತೆ ನೀಡಿದ್ದು ಈ ಸಾಲಿನಲ್ಲಿ ರೂ. 3180.52 ಲಕ್ಷಗಳನ್ನು ಒದಗಿಸಿದ್ದು, ಇದರಲ್ಲಿ ರೂ. 500.00 ಲಕ್ಷಗಳನ್ನು ಕಡಿತಗೊಳಿಸಿದ್ದರಿಂದ ಮೇಲ್ಕಂಡ ಹೆಚ್ಚುವರಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ.

(ಊ) ಅನುದಾನ ಲಭ್ಯತೆ ಅನುಗುಣವಾಗಿ ಕಾಮಗಾರಿ ಕೈಗೊಳ್ಳಲಾಗುವುದು.

ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸುವುದು

5 (70) **ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ):–** ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೆ:

(ಅ) ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಬೆಲಸಿಂದ ವನ್ಯ ಅರಣ್ಯ ಪ್ರದೇಶವು ಅತೀ ಪ್ರಾಮುಖ್ಯತೆಯನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಈ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

(ಇ) ಈ ಅರಣ್ಯ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರ ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ;

(ಈ) ಹಾಗಿದ್ದಲ್ಲಿ, ಅಭಿವೃದ್ಧಿಯ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ವಿವರಗಳನ್ನು ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):–

(ಅ) ಹೌದು.

(ಆ) ಈ ಅರಣ್ಯ ಪ್ರದೇಶವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಪಡಿಸಲು ಅರಣ್ಯ ಪ್ರದೇಶದ ಸುತ್ತ ಚೈನ್‌ಲಿಂಕ್ ಮೇಷ್ ಬೇಲಿ ನಿರ್ಮಿಸಲು ಉದ್ದೇಶಿಸಿದ್ದು, 2013–14ನೇ ಸಾಲಿನಲ್ಲಿ 1.50 ಕಿ.ಮೀ.